## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆಃ 1326/2019**

ಫಿರ್ಯಾದಿದಾರರುಃ

ಸರ್ಕಾರದ ಪರ
ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ
ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ

ಆರೋಪಿ/ಗಳು

1. ಪುರುಷೋತ್ತಮ @ ಪುರುಷೋತ್ತಮ ರೆಡ್ಡಿ
   ಬಿನ್ ತಿಮ್ಮಯ್ಯ ರೆಡ್ಡಿ
   ವಯಸ್ಸು ಸುಮಾರು 48 ವರ್ಷಗಳು,

2. ರವಿ ಆರ್. ಟಿ. @ ರವಿರೆಡ್ಡಿ,
   ಬಿನ್ ತಿಮ್ಮಯ್ಯ ರೆಡ್ಡಿ
   ವಯಸ್ಸು ಸುಮಾರು 45 ವರ್ಷಗಳು,

3. ವಿನೋದ್ ಕುಮಾರ್ @ ವಿನೋದ್ ರೆಡ್ಡಿ
   ಬಿನ್ ಸ್ವಾಮಿ ರೆಡ್ಡಿ
   ವಯಸ್ಸು ಸುಮಾರು 30 ವರ್ಷಗಳು,

4. ಜಯರಾಮರೆಡ್ಡಿ,
   ಬಿನ್ ತಿಮ್ಮಯ್ಯ ರೆಡ್ಡಿ
   ವಯಸ್ಸು ಸುಮಾರು 50 ವರ್ಷಗಳು,
   ಎಲ್ಲರ ವಾಸಃ ರೆಡ್ಡಿ ಕೊಪ್ಪಲು ಗ್ರಾಮ,
   ಹುಣಸೂರು ತಾಲ್ಲೂಕು,
   ಮೈಸೂರು ಜಿಲ್ಲೆ.

### ದೋಷಾರೋಪಣೆ

ಶ್ರೀ ಮನು ಪಟೇಲ್ ಬಿ.ವೈ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

1. ದಿಃ 09.03.2019 ರಂದು ಮಧ್ಯಾಹ್ನ ಸುಮಾರು 2.00 ಗಂಟೆ ಸಮಯದಲ್ಲಿ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ರೆಡ್ಡಿ ಕೊಪ್ಪಲು ಗ್ರಾಮದ ಉದ್ದೂರು ಸರ್ವೆ

ನಂ.42/ಪಿ6 ರಲ್ಲಿ ಸಾಕ್ಷಿ -1 ರವರ ತಂದೆ ಹೆಸರಿನಲ್ಲಿದ್ದ 2 ಎಕರೆ ಜಮೀನನ್ನು ಸಾಕ್ಷಿ -1 ರವರ ಪೌತಿ ಖಾತೆ ಮಾಡಿಸಿದ್ದು ಸಾಕ್ಷಿ -1 ರವರು ಸದರಿ ಜಮೀನಿನ ಬಳಿ ಹೋದಾಗ 1 ಮತ್ತು 2 ನೇ ಆರೋಪಿಗಳಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶವುಳ್ಳವರಾಗಿದ್ದು ಸಾಕ್ಷಿ -1 ರವರ ಜಮೀನಿಗೆ 1 ನೇ ಆರೋಪಿಯು ತಂತಿ ಬೇಲಿ ಹಾಕಿದ್ದ ಬಗ್ಗೆ ಸಾಕ್ಷಿ-1 ರವರು ಕೇಳಿದ್ದಕ್ಕೆ 1 ನೇ ಆರೋಪಿ ಜಮೀನು ನಮ್ಮದು ಯಾರಿಗೂ ಬಿಡಲ್ಲ ಎಂದು ಹೇಳಿ ಸಾಕ್ಷಿ -1 ರವರ ಮೇಲೆ ಗಲಾಟೆ ಮಾಡಿ ಕಳುಹಿಸಿರುತ್ತಾರೆ. ಮೇಲ್ಕಂಡ ವಿಚಾರಕ್ಕೆ ಸಂಬಂಧಿಸಿದಂತೆ ದಿ.10.03.2019 ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ಸಾಕ್ಷಿ -1 ಮತ್ತು ಸಾಕ್ಷಿ -2 ರವರು ಮುಖಂಡರನ್ನು ಜಮೀನಿನ ಬಳಿ ಕರೆದುಕೊಂಡು ಹೋಗಿ ತಂತಿ ಬೇಲಿಯನ್ನು ತೋರಿಸುತ್ತಿದ್ದಾಗ ಅಲ್ಲಿಗೆ ಬಂದ 1 ನೇ ಆರೋಪಿ ಸಾಕ್ಷಿ -1 ರವರಿಗೆ ಅವಾಚ್ಯ ಶಬ್ದಗಳಿಂದ ಏನೋ ಬೋಳಿಮಗನೇ ಎಂದು ಹಾಗೂ 2 ನೇ ಆರೋಪಿಯು ಸಾಕ್ಷಿ-1 ಮತ್ತು 2 ರವರನ್ನು ಉದ್ದೇಶಿಸಿ ಬೋಳಿಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೆಯದಾಗಿ ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ನೇ ಆರೋಪಿಯಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶವುಳ್ಳವರಾಗಿದ್ದು ಸಾಕ್ಷಿ -1 ರವರಿಗೆ ನೀನು ಗ್ರಾಮದ ಮುಖಂಡರನ್ನು ಕರೆದುಕೊಂಡು ಬಂದರೆ ನಿನಗೆ ಜಮೀನು ಬಿಡ್ತೀನಾ ಎಂದು ಒಂದು ಕಲ್ಲನ್ನು ಎತ್ತಿಕೊಂಡು ತಲೆಯ ಮುಂಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

1. ಮೂರನೆಯದಾಗಿ ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 2 ಮತ್ತು 3 ನೇ ಆರೋಪಿಗಳಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶವುಳ್ಳವರಾಗಿದ್ದು ಸಾಕ್ಷಿ -1 ರವರನ್ನು ತಬ್ಬಿ ಹಿಡಿದುಕೊಂಡು ಸಾಕ್ಷಿ -1 ರವರನ್ನು ಅಡ್ಡಗಟ್ಟಿ ನಿಲ್ಲಿಸಿ ಮುಂದೆ ಚಲಿಸದಂತೆ ಅಕ್ರಮ ತಡೆಯನ್ನುಂಟು ಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ನಾಲ್ಕನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 2 ಮತ್ತು 3 ನೇ ಆರೋಪಿಗಳಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶವುಳ್ಳವರಾಗಿದ್ದು ಸಾಕ್ಷಿ -1 ರವರನ್ನು ತಬ್ಬಿ ಹಿಡಿದುಕೊಂಡು ಕೈಗಳಿಂದ ಮೈ ಕೈಗೆ ಹೊಡೆದಿದ್ದು

ಹಾಗೂ ಇದನ್ನು ಬಿಡಿಸಲು ಬಂದ ಸಾಕ್ಷಿ -2 ರವರನ್ನು 4 ನೇ ಆರೋಪಿಯಾದ ನೀವು ತಮ್ಮ ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

5. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 4 ನೇ ಆರೋಪಿತರಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶವುಳ್ಳವರಾಗಿದ್ದು ಸಾಕ್ಷಿ 1 ಮತ್ತು 2 ರವರಿಗೆ "ಈ ದಿನ ನಮ್ಮಗಳ ಕೈಗಳಿಂದ ತಪ್ಪಿಸಿಕೊಂಡಿದ್ದೀರಿ ನಿಮ್ಮನ್ನು ಇಂದಲ್ಲ ನಾಳೆ ಸಾಯಿಸದೇ ಬಿಡುವುದಿಲ್ಲ " ಎಂದು ಕೊಲೆ ಬೆದರಿಕೆ ಹಾಕಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ಮನು ಪಟೇಲ್ ಬಿ.ವೈ)**

ದಿನಾಂಕಃ **24.05.2022**

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.**